ಕಾದಂಬರೀಸಂಗ್ರಹ ಗ್ರಂಥಮಾಲೆ. ಸಂ ೪೦.

—ಸೋಜಿಗದ ಬಾಂಧವ್ಯ—

ಎಸ್. ಕೃಷ್ಣಸ್ವಾಮಿ,

ಚಿತ್ರದುರ್ಗ.

M. V. Press.,

Mysore.

1918

ಪೀಠಿಕೆ.

ಇದೊಂದು ಕಲ್ಪನಾಕಥೆ. ಗ್ರಂಥವು ಚಿಕ್ಕದಾದರೂ ಹಲವು ನೀತಿಗಳು ಅಡಕವಾಗಿವೆ. ವಿದ್ಯಾರ್ಥಿಯಾದ ನನ್ನ ಈ ಲೇಖನವು ಪಾಠಕರಿಂದ ಸಮಾದೃತವಾದರೆ ನಾನು ಕೃತಾರ್ಥನೇಸರಿ. ಇದರಲ್ಲಿರುವ ದೋಷಗಳನ್ನು ಆರಾದರೂ ತಿಳಿಯಪಡಿಸಿದರೆ ಅವುಗಳನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವೆನು.

ಈ ಪುಸ್ತಕವನ್ನು ಪ್ರಚಾರಕ್ಕೆ ತಂದ ವೇ|| ಬ್ರಂ|| ಚಾಮರಾಜನಗರದ ವೆಂಕಟರಮಣಶಾಸ್ತ್ರಿಗಳ ಮಹೋಪಕಾರವು ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿರುವುದು. ಇದರಂತೆಯೇ ಎಲ್ಲರೂ ನನ್ನ ಇತರ ಗ್ರಂಥಗಳಿಗೂ ಉತ್ತೇಜನ ಕೊಡುವರೆಂದು ನಂಬಿರುವೆನು, ಮತ್ತು

ಕಿರಿದೆನಿಸಿಪೀಲೇಖನವನು |
ಬರೆದಂ ಕಿರಿದರಿವನುಳ್ಳ ಕೃಷ್ಣ ರಂಗಾ ||
ಯರ್ರ ಪುತ್ರಂ ನಲವಿಂದಂ |
ಹಿರಿಯರ್ಗುಣ ಕೊಳ್ಳುಬಿಡುಗೆ ದೋಷಮನಿದರೊಳ್ ||

ಚಿತ್ರದುರ್ಗ
25-8-1918

ಇತಿ
ಎಸ್. ಕೃಷ್ಣಸ್ವಾಮಿ

|| ಶ್ರೀರಾಮಚಂದ್ರಾಯನಮಃ ||

ಸೋಜಿಗದ ಬಾಂಧವ್ಯ.

ಪ್ರಥಮ ಬಿಂದು

(ಪ್ರತಿಜ್ಞೆ)

ತಪನನ ಕಿರಣಗಳು ಬಹು ತೀಕ್ಷ್ಣವಾಗಿದ್ದುವು. ಪ್ರಭಾಕರನ ಆ ಚಂಡ ಕಿರಣಗಳಿಂದ, ಅನೇಕ ಮೃಗಪಕ್ಷಿಗಳು ಮೃತ್ಯುಶಯ್ಯೆಯಲ್ಲಿ ಪವಡಿಸುತ್ತಿದ್ದುವು. ಕೆರೆ ಕಟ್ಟೆಗಳೆಲ್ಲಾ ಬಣಗಿ ಹೋಗಿದ್ದುವು ದಾರುಣವಾದ ಬಿಸಿಲಿನ ತಾಪವನ್ನು ಸಹಿಸಲಾರದೆ, ಸರ್ವಪ್ರಾಣಿಗಳೂ ನೆಳಲನ್ನು ಕಂಡೆಡೆಯಲ್ಲೆಲ್ಲಾ ವಿಶ್ರಮಿಸಿಕೊಳ್ಳುತ್ತಿದ್ದವು. ಯುವಕನಾದೊರ್ವ ಪಥಿಕನು ಶ್ರೀನಗರದ ರಾಜವೀಥಿಯಲ್ಲಿ ಬರುತ್ತಿದ್ದನು. ತಪಿಸುತ್ತಿರುವ ದಿನಮಣಿಯು, ಪಾದದ ಅದೋಭಾಗದಲ್ಲಿ ಬೊಬ್ಬೆಗಳನ್ನುಂಟು ಮಾಡುವಂತಿದ್ದ ಉಷ್ಣತಮವಾದ ಭೂಮಿಯೂ ಪಥಿಕನನ್ನು ಬಳಲಿಕೆಯಿಂದ ಬಹು ದೈನ್ಯದೆಸೆಗೆ ತಂದವು. ಪಥಿಕನಿಗೆ ಆಯಾಸವು ಬರುತ್ತ ಬರುತ್ತಾ ಹೆಚ್ಚಿತು. ಇನ್ನು ಮುಂದೆ ನಡೆಯಲು ಕಷ್ಟವೆಂದರಿತು ಸಮೀಪದಲ್ಲಿಯೇ ದಟ್ಟವಾಗಿಯೂ ಕೋಮಲವಾಗಿಯೂ ಬೆಳೆದಿದ್ದ ಒಂದು ಮರದ ನೆರಳನಲ್ಲಿ ತನ್ನ ಗಂಟನ್ನಿಟ್ಟು ಸಮೀಪದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ನಿದ್ರಿಸಲಾರಂಭಿಸಿದನು.

ಎಚ್ಚತ್ತು ನೋಡುವಾಗ ಸೂರ್ಯಾಸ್ತಮಾನವಾಗುತ್ತಿತ್ತು. ಜನರೆಲ್ಲರೂ ತಮ್ಮ ತಮ್ಮ ಮನೆಗೆ ಹೋಗುತ್ತಿದ್ದರು. ಅವನು ಬೆಚ್ಚಿಬಿದ್ದವನಂತೆ " ಈ ಸ್ಥಳದಲ್ಲಿ ನನಗೆ ಪರಿಚಿತರಾರೂ ಇಲ್ಲ ನಾನೆಲ್ಲಿಗೆ ಹೋಗಬೇಕು ?

ಅಯ್ಯೋ ! ಏನು ಮಾಡಲಿ ! ರಾತ್ರಿಯನ್ನು ಹೇಗೆ ಕಳೆಯಲಿ! ದೇವಾ ! ನೀನೇ ಗತಿಯೋ !'' ಎಂದು ನಾನಾವಿಧವಾಗಿ ತಹ ತಹ ಪಡಲಾರಂಭಿಸಿದನು. ಪಥಿಕನು ಶಂಕರೀದುರ್ಗದವನು. ಅವನಿಗೆ ಶ್ರೀನಗರದಲ್ಲಿ ಪರಿಚಿತರಾರೂ ಇರಲಿಲ್ಲ. ಈಗವನಿಗೆ ಸ್ಥಳವನ್ನು ಕೊಡುವವರಾರು ? ಆದುದರಿಂದ ಅವನು ವ್ಯಸನಾಕ್ರಾಂತನಾಗಿದ್ದನು. ಹಾಗೆಯೇ ಸ್ವಲ್ಪ ಯೋಚಿಸಿ ಅಲ್ಲಿಂದೆದ್ದು ರಾಜಬೀದಿಯಲ್ಲಿಯೇ ಮುಂಬರಿದನು.

ಬಹಳ ಹೊತ್ತಿನವರೆಗೂ ಊರೆಲ್ಲಾ ತಿರುಗಾಡಿದರೂ ಮಲಗಲು ಸ್ವಲ್ಪವೂ ಸ್ಥಳ ಸಿಗಲಿಲ್ಲ. ಕಡೆಗವನಿಗೇನೂ ತೋಚದಂತಾಗಿ ಒಬ್ಬ ಅಕ್ಕಸಾಲಿಗನ ಮನೆಯ ಜಗುಲಿಯ ಮೇಲೆ ಕುಳಿತುಕೊಂಡನು. ಒಳಗೆ ಯಾರೋ ಈರ್ವರು ಮಾತಾಡುತ್ತಿದ್ದಂತೆ ಸ್ಪಷ್ಟವಾಗಿ ಕೇಳುತ್ತಿತ್ತು. ಅವರ ಸಂಭಾಷಣೆಯನ್ನು ಕೇಳುತ್ತಾ ಯುವಕನಲ್ಲಿಯೇ ಕುಳಿತುಬಿಟ್ಟನು

ಒಬ್ಬ—ಅವನು ನಿನ್ನಂತಹ ಕೃಪಣಮೂರ್ತಿಯೇ! ದೊಡ್ಡ ಜಮೀನ್ದಾರ. ಜಮೀನಿನಿಂದಲೇ ತಿಂಗಳಿಗೆ ಐದು ಸಹಸ್ರರೂಪಾಯಿ ಬರುತ್ತದೆ ಮೇಲೆ ಮಾಮಲೆಯದೊಂದು ಸಹಸ್ರ, ಇಷ್ಟಾದರೂ ಒಂದು ದಾನಮಾಡುವವನಲ್ಲ. ಒಂದು ತ್ಯಾಗ ಮಾಡುವವನಲ್ಲ ದಾನ, ಭೋಗ, ಇವೆರಡೂ ಇಲ್ಲದ ಧನವು ಮೂರನೆಯ ಗತಿಯಾದ ನಾಶವನ್ನು ಹೊಂದುವುದು' ಎಂಬ ವಾಕ್ಯವು ಯಾರ ಮನಸ್ಸಿಗೂ ಹಿಡಿಯುವುದಿಲ್ಲ ಅದರಲ್ಲಿಯೂ ಅವನ ಮನಸ್ಸಿಗೆ ಬರುವುದೇ ಇಲ್ಲ

ಇನ್ನೊರ್ವ—ನೀನು ಏನೋ ಹೇಳುವಿ. ಮುಖ್ಯವಾಗಿ ಏನೆಂದರೆ, ತನ್ನಲ್ಲಿರುವ ಹಣವು ವೆಚ್ಚವಾಗುವುದೆಂದು ಹೆಚ್ಚಾಗಿ ತನ್ನಲ್ಲಿಗೆ ಜನರನ್ನು ಸೇರಿಸುವುದಿಲ್ಲ.

ಮೊದಲನೆಯವನು—"ಅದಂತೂ ನಿಜ'' ವೆಂದು ಹೊರಟುಹೋದನು.

ಹೊರಗೆ ವೇದಿಕೆಯ ಮೇಲೆ ಪವಡಿಸಿದ್ದ ಪಥಿಕನು ಅವರ ಸಂಭಾಷಣೆಯನ್ನು ಆದ್ಯಂತವಾಗಿ ಕೇಳಿದನು. ಅವನ ಮನಸ್ಸಿನಲ್ಲಿ ಅನೇಕ ಚಿಂತಾತರಂಗಗಳು ಉತ್ಪನ್ನವಾದುವು.

ಆರು ಚಿರಕಾಲ ಶಾಂತಚಿತ್ತರಾಗಿಯೂ ಗುಣಶೀಲರಾಗಿಯೂ ನಿರೀಹರಾಗಿಯೂ ಪರಾಜ್ಞಾಪರರಾಗಿಯೂ ಇರುವರೋ ಅಂತಹವರು ಒಂದು

ಸಾ ವಿಶೇಷಾವಸ್ಥೆಯಲ್ಲಿ ಬಿದ್ದರೆ ಸ್ವಾತಂತ್ರ್ಯ, ಏಕಾಗ್ರತೆ ಕರ್ಮಕ್ಷಮತೆ, ತೇಜಸ್ಸು, ಸ್ವಾಧೀನತ್ವ ಸ್ಥಿರಪ್ರತಿಜ್ಞೆ ಮುಂತಾದ ಮಹಾದ್ಭುತ ಗುಣಗಳ ಪರಿಚಯವನ್ನು ಕೋರುವರು. ಚರಿತ್ರೆಗಳಲ್ಲಿಯೂ ಕಾದಂಬರಿಗಳಲ್ಲಿಯೂ, ಇಂತಹ ಅದ್ಭುತ ದೃಷ್ಟಾಂತರಗಳನ್ನು ನೋಡಬಹುದು. ಮನುಜರ ಚರಿತ್ರೆಯಲ್ಲಿ ಒಮ್ಮೊಮ್ಮೆ ಇಂತಹ ಪರಿವರ್ತನೆಗಳು ಹೇಗೆ ಸಂಘಟಿತವಾಗುವುವು ಎಂಬುದನ್ನೂ ವಿಚಾರಿಸಲು ಮಾನವರಾದ ನಮಗೆ ಸಾಧ್ಯವಲ್ಲ. ಸೌಮ್ಯ ಮೂರ್ತಿಯಾಗಿಯೂ ಶಾಂತಚಿತ್ತನಾಗಿಯೂ ನಮ್ರಸ್ವಭಾವವುಳ್ಳವನಾಗಿಯೂ ಇದ್ದ ಆ ಪಥಿಕನ ಮನದಲ್ಲಿಯೇ ಒಂದು ದೃಢಪ್ರತಿಜ್ಞೆಯನ್ನು ಮಾಡಿದನು.

ಮಧ್ಯೇ ಮಧ್ಯೇ "ಕರ್ತವ್ಯವನ್ನು ಪ್ರಾರಂಭಿಸಿದಂತೆ ಆಯಿತು. ಆದರೆ ಅನುಷ್ಠಾನಕ್ಕೆ ಆರಂಭಿಸ ಬೇಕು." ಎಂದಂದು ಕೊಂಡನು

ಆ ಸಮಯಕ್ಕೆ ಅಕ್ಕಸಾಲಿಗನು ಹೊರಗೆ ಬಂದು ಇವನನ್ನು ನೋಡಿ "ಏಕಯ್ಯಾ? ಇಲ್ಲಿ ಮಲಗಿರುವೆ? ಒಳಗೆ ಬಾ; ಹಣ್ಣು ಹಂಪಲುಗಳನ್ನು ತಿನ್ನು; ನಿನ್ನ ನಾಮಧೇಯವೇನು?" ಎಂದು ಪ್ರಶ್ನೆಮಾಡಿದನು.

ಪಥಿಕ-ನನ್ನ ಹೆಸರು ಅನಂತನಾಥ ಶರ್ಮ

ಅಕ್ಕಸಾಲೆ-ತಾವು ಯಾರಮಕ್ಕಳು?

ಪಥಿಕ-ನಾನು ಶಂಕರೀ ದುರ್ಗದ ಭವಾನಂದಶರ್ಮರ ಪುತ್ರ.

ಅಕ್ಕಸಾಲೆಯವನು ಅವನನ್ನು ಆದರದಿಂದ ಒಳಕ್ಕೆ ಕರೆದುಕೊಂಡು ಹೋಗಿ ಕೂಡಿಸಿ ಅವನಿಗೆ ತಿನ್ನಲು ಹಣ್ಣುಹಂಪಲುಗಳನ್ನು ಕೊಟ್ಟು ತಾಂಬೂಲವನ್ನು ಕೊಟ್ಟು ತಾಂಬೂಲವನ್ನು ಸ್ವೀಕರಿಸಲು ತಟ್ಟೆಯನ್ನಿತ್ತು ಅವನನ್ನು ಅಲ್ಲಿಯೇ ಮಲಗುವಂತೆ ಹೇಳಿ ತಾನು ಶಯನಿಸಲೋಸುಗ ಒಳಕ್ಕೆ ಹೊರಟುಹೋದನು,

ದ್ವಿತೀಯ ಬಿಂದು.

—(❋)—

(ಮಗು)

ಪಕ್ಷಿಗಳ ಕಿಲಕಿಲಧ್ವನಿಯು ದಿಕ್ತಟಗಳಲ್ಲಿ ಪ್ರತಿಧ್ವನಿತವಾಗಲಾರಂಭಿಸಿತು ! ಪರಪುಟ್ಟದ ಕುಹೂರವವೂ ಆರಂಭಿಸಲ್ಪಟ್ಟಿತು ! ಅಪ್ಯಾಯಮಾನವಾದ ಮಂದಮಾರುತವು ಎಲ್ಲೆಲ್ಲಿಯೂ ಸುಳಿಯಲಾರಂಭಿತು ! ಪ್ರಭಾತದ ಸಮಾರಂಭವನ್ನು ನೋಡಿ ನಿದ್ರಾಲತಾಂಗಿಯು ಭೀತಳಾಗಿ ತನ್ನ ಆಲಿಂಗನದಿಂದ ಸುಖಿಸುತ್ತಿದ್ದವರನ್ನು ತ್ಯಜಿಸಿ, ಮರೆಯಾದಳು. ಸಾರಥಿಯಾದ ಅರುಣನಿಂದ ಸುಸಜ್ಜಿತವಾದ ರಥವನ್ನೇರಿ ಸೂರ್ಯದೇವನು ಪರ್ವತಪ್ರದೇಶಗಳನ್ನೂ ಪುಷ್ಪವೃಕ್ಷಗಳನ್ನೂ ತನ್ನ ರಶ್ಮಿಯಿಂದ ನಗುವಂತೆ ಮಾಡುತ್ತಿದ್ದನು

ಪ್ರಾತಃಕಾಲವಾಯಿತು. ಅನಂತನಾಥನೂ ಎದ್ದು ಅಕ್ಕಸಾಲೆಯವನ ಮನೆ ಬಿಟ್ಟು ಹೊರಟನು ; ಹೋದವನು ಅಶ್ವವರ್ತಕನೊಬ್ಬನ ಬಳಿಗೆ ಹೋಗಿ, ಉತ್ತಮಾಶ್ವವೊಂದನ್ನು ಬೆಲೆಗೆ ತೆಗೆದುಕೊಂಡು, ಹಣಕ್ಕೆ ಮನೆಗೆ ಬರುವಂತೆ ಹೇಳಿ, ತನ್ನಲ್ಲಿದ್ದ ಉತ್ತಮ ವಸ್ತ್ರಗಳಿಂದಲಂಕೃತನಾಗಿ ಕುದುರೆಯ ಮೇಲೆ ಕುಳಿತು ಚಟುಕದಿಂದ ತಾಡನ ಮಾಡಲಾರಂಭಿಸಿದನು. ಅಶ್ವವರ್ತಕನು ಪಕ್ಕದಲ್ಲಿಯೇ ಬರುತ್ತಿದ್ದುದರಿಂದ ಪ್ರೇಕ್ಷಕರಲ್ಲಿ ಹಲವರು ಅನಂತನಾಥನನ್ನುಒಬ್ಬ ಪದವೀಧರನೆಂತಲೂ ಪಕ್ಕದಲ್ಲಿ ಬರುತ್ತಿದ್ದವನನ್ನು ಅವನ ಸೇವಕನೆಂತಲೂ ಭಾವಿಸಿದರು. ವಾಚಕ ಮಹಾಶಯ ! ಅದು ತಪ್ಪಲ್ಲವೇ ?

ಕೃಷ್ಣಮೂರ್ತಿಯ ಮನೆಗೆ ದ್ವಾರಪಾಲಕರಲ್ಲದೆ ಭದ್ರವಾದ ಕಾವಲೂ ಸಹ ಇರುವುದು. ಹಗಲು ಹಲವುಜನ ರಾತ್ರಿ ಹಲವುಜನ ಪಹರೆ ಕೊಡುವರು. ಹೀಗಿದ್ದರೂ ಅನಂತನಾಥನ ಠೀವಿಯನ್ನು ನೋಡಿ ಅವನನ್ನು ಯಾರೂ ತಡೆಯಲಿಲ್ಲ. ಕುದುರೆಯನ್ನು ಲಾಯದಲ್ಲಿ ಕಟ್ಟುವಂತೆ ಒಬ್ಬ ಸೇವಕನಿಗೆ ಅಪ್ಪಣೆಯನ್ನಿತ್ತನು ಅಶ್ವವರ್ತಕನನ್ನು ಮೂರು ನಾಲ್ಕುದಿನ ಬಿಟ್ಟು ಬರುವಂತೆ ಹೇಳಿ ಕಳುಹಿ ಒಳಗೆ ಹೋದನು. ಅಲ್ಲಿ

ಒಂದು ಮಗುವು ಇವನ ದೃಷ್ಟಿಗೆ ಗೋಚರವಾಯಿತು. ಅದಕ್ಕೆ ವಿಶಾಲವಾದ ನೇತ್ರಗಳು; ಸುತ್ತಿಸುತ್ತಿಕೊಂಡಿರುವ ಮುಂಗುರುಳು, ಪುಟ್ಟಪುಟ್ಟವಾದ ಹಸ್ತಗಳು. ಅವನ ತೇಜಸ್ಸನ್ನೂ ಸೌಂದರ್ಯವನ್ನೂ ನೋಡಿದರೆ, ಲಾಲನೆಮಾಡಬೇಕೆಂಬ ಬುದ್ಧಿಯು ಪುಟ್ಟುವಂತಿತ್ತು. ಅನಂತನಾಥನು ಆ ಮಗುವು ಕೃಷ್ಣಮೂರ್ತಿಯ ಸಂತಾನವೇ ಇರಬಹುದೆಂದೂಹಿಸಿ ಅದನ್ನೆತ್ತಿ ತೊಡೆಯಮೇಲೆ ಕೂಡಿಸಿಕೊಂಡು ಲಾಲನೆ ಮಾಡುತ್ತಾ, "ಕಂದ, ನಿನ್ನ ಹೆಸರೇನಪ್ಪ ?" ಎಂದು ಕೇಳಲು, ಅದು ಮುದ್ದು ಮುದ್ದಾಗಿ 'ನಗೇಂದ್ರ' ನೆಂದು ಉತ್ತರ ಕೊಟ್ಟಿತು.

ಅನಂತನಾಥ—ಏನು ? ನಗೇಂದ್ರನೇ ?

ನಗೇಂದ್ರ—ಹೂ.

ಅನಂತ—ನಿಮ್ಮ ತಂದೆಯ ಹೆಸರೇನು ?

ನಗೇಂದ್ರ—ಕಿಟ್ಟಮೂರ್ತಿ.

ಅನಂತ—ನಿಮ್ಮ ತಾಯಿಯ ಹೆಸರೇನು ?

ನಗೇಂದ್ರ—ಲಾದಾಬಾಯಿ (ರಾಧಾಬಾಯಿ)

ಅನಂತ—ನಿಮ್ಮಪ್ಪ ಮನೆಗೆ ಹಿಂದಿರುಗಿ ಎಷ್ಟು ಗಂಟೆಗೆ ಬರುತ್ತಾನೆ ?

ನಗೇಂದ್ರ—ಬೆಳಗ್ಗೆ ಎದ್ದು ಹೋದವನು ಹನ್ನೊಂದು ಗಂಟೆಗೆ. ಮೂರು ಗಂಟೆಗೆ ಹೋದವನು ಸಂಜೆ ಏಳು ಗಂಟೆಗೆ.

ಅನಂತ—ನಾನು ಯಾರು ? ಗೊತ್ತಿದೆಯೋ ?

ನಗೇಂದ್ರ—ನಂಗೆ ಗೊತ್ತಿಲ್ಲ.

ಅನಂತ—ನಿನಗೆ ವಯಸ್ಸೆಷ್ಟು ?

ನಗೇಂದ್ರ—ನಂಗೆ ಐದು ವರ್ಷ.

ಅನಂತ—ನಿನಗೆ ಅಣ್ಣಂದಿರೆಷ್ಟು ಜನ ?

ನಗೇಂದ್ರ—ಇನ್ನೊಬ್ಬನಿದ್ದಾನೆ.

ಅನಂತ—ಇನ್ನೊಬ್ಬ ಅಂದರೆ, ಇಬ್ಬರಿರುವರೇ ?

ನಗೇಂದ್ರ—ಅಲ್ಲ. ನಾನೊಬ್ಬ. ಅವನೊಬ್ಬ.

ಅನಂತ—ಅವನೆಲ್ಲಿ ?

ನಗೇಂದ್ರ—ಶಾಲೆಗೆ ಹೋಗಿದ್ದಾನೆ.

ಅನಂತ—ಯಾವಾಗ ಬರುತ್ತಾನೆ ?

ನಗೇಂದ್ರ—ಇನ್ನು ಸ್ವಲ್ಪ ಹೊತ್ತಾದ ಮೇಲೆ.

ಇವರ ಕಡೆಯ ಮಾತುಗಳು ಅಡುಗೆಯಮನೆಯಲ್ಲಿದ್ದ ರಾಧಾಬಾಯಿಯ ಕಿವಿಗೆ ಬಿದ್ದವು. ಆಕೆಯು ಬಂದಿರುವವರು ಯಾರೆಂದು ನೋಡಲು ಹೊರಗೆ ಬಂದಳು. ಆಕೆಯು ಹೊರಗೆಬಂದ ಕೂಡಲೇ, "ರಾಧಾ. ಕೃಷ್ಣಮೂರ್ತಿಯು ಇನ್ನೂಬರಲಿಲ್ಲವೇ? ಅವನಿಗಾವಾಗಲೂ ಇದೇ ಹುಚ್ಚು," ಎಂದು ನುಡಿದನು. ಇದರಿಂದ ಬಂದಿದ್ದ ವ್ಯಕ್ತಿಯು ತನ್ನ ಪತಿಯ ಸೋದರನಿರಬಹುದೆಂದು ತಿಳಿದಳು. ಐಶ್ವರ್ಯ ಮದದಿಂದ ಏನೂ ಮಾತನಾಡಲಿಷ್ಟವಿಲ್ಲದೆ ತನ್ನಕಾರ್ಯಕ್ಕಾಗಿ ತೆರಳಿದಳು. ಅನಂತನಾಥನು ಪುನಃ ಲಾಲಸೆಗಾರಂಭಿಸಿದನು. ಆ ಕಾಲಕ್ಕೆ ರಾಧಾಬಾಯಿಯ ಜ್ಯೇಷ್ಠಪುತ್ರನು ಶಾಲೆಯಿಂದ ಬಂದನು. ನಮ್ಮ ಅನಂತನಾಥನನ್ನು ಯಾರೋ ಒಬ್ಬ ನೂತನ ಪುರುಷನೆಂದು ತಿಳಿದು ಅವನ ವಿಷಯವನ್ನೇ ಮನಕ್ಕೆ ತಂದುಕೊಳ್ಳದೆ ತಿಂಡಿಯನ್ನು ತಿನ್ನಲು ತಾಯಿಯ ಬಳಿಗೆ ಹೋದನು. ಆಗತಾನೆ ಅವನು ಶಾಲೆಯಿಂದ ಬಂದಿದ್ದನಾದ ಕಾರಣ ರಾಧಾಬಾಯಿಯು ತಿಂಡಿಯನ್ನು ಕೊಟ್ಟಳು. ಅವನು ತನ್ನ ಮಾತೃವು ಕೊಟ್ಟುದುದನ್ನು ಸವಿದು ತಂಗೆಯನ್ನು ಕರೆತರಲು ಹೋದನು

ಕೃಷ್ಣಮೂರ್ತಿಯು ಮನೆಗೆ ಬರುವಾಗ ದೂರದಿಂದಲೇ ಅನಂತನಾಥ ಲಾಲಸೆಯನ್ನು ನೋಡಿ ಪತ್ನಿಯ ಸೋದರನಿರಬೇಕೆಂದು ತಿಳಿದನು, ಸಿರಿಮದಾಂಧರಿಗೆ ಏನೂ ವಿವೇಚನೆಯಿರುವುದಿಲ್ಲ. ಮನೆಗೆ ಬಂದನು. ಸ್ನಾನವಾಯಿತು; ಭೋಜನವಾಯಿತು. ಅನಂತನಾಥನು ಮೂರು ದಿನಗಳಿಂದಲೂ ಹಸಿದಿದ್ದನಾದ ಕಾರಣ ಸಂಕೋಚದಿಂದ ಬೇಡ ಬೇಡ, ವೆಂದು ಹೇಳುತ್ತಲೇ ಜಗ್ಗಿ ಹೊಡೆದುಬಿಟ್ಟನು; ಅವನಿಗೆ ಆದ ಸಂತಸವಿನ್ನೆಷ್ಟೋ ! ಮೂರು ದಿನಗಳಿಂದ ಅನ್ನ ನೀರನ್ನು ಕಾಣದುದರಉದ್ದೇಶ್ಯವು ಪೂರ್ತಿಯಾಯಿತು. ಭೋಜನಾನಂತರ ತಾಂಬೂಲವನ್ನು ಸ್ವೀಕರಿಸಿದುದಾಯಿತು. ಕೃಷ್ಣಮೂರ್ತಿಯು ಮತ್ತೆ ಕಾರ್ಯಾಲಯಕ್ಕೆ ಹಿಂದಿರುಗಿದನು.

ಅನಂತನು ನಗೇಂದ್ರನನ್ನು ಹತ್ತಿರದಲ್ಲಿ ಕೂಡಿಸಿಕೊಂಡು ಒಂದು ಪತ್ರವನ್ನು ಬರೆಯಲಾರಂಭಿಸಿದನು. ಈ ಹುಡುಗನು ಸುಮ್ಮನಿರುವನೇ ?

ಎಂದಿಗೂ ಇಲ್ಲ. "ಕಾಗದ ಯಾವ ಊರಿಗೆ ಬರೆಯುತ್ತೀರಿ ?'' ಎಂದು ಪ್ರಶ್ನಿಸಿದನು.

ಅನಂತ—ನಮ್ಮ ಮಹಾರಾಜರಿಗೆ.

ಹುಡುಗ—ಮಹಾರಾಜರು ಅಂದರೇನು ?

ಅನಂತ—ಒಂದು ದೇಶವನ್ನಾಳುವವನು ಮಹಾರಾಜ

ಹುಡುಗ—ಹಾಗಾದರೆ ಇದು ಯಾವ ಊರ ಮಹಾರಾಜರಿಗೆ ?

ಅನಂತ—ಸ್ವರ್ಣಗಡದ ಮಹಾರಾಜರಿಗೆ ಬರೆಯುತ್ತೇನೆ.

ನಗೇಂದ್ರ—ಅವರ ಹೆಸರೇನು ?

ಅನಂತ—ಸುರೇಂದ್ರನಾಥರವರು.

ತನ್ನ ನಾಲ್ಕು ಪ್ರಶ್ನೆಗಳಿಗೂ ಸದುತ್ತರಗಳು ದೊರೆತುದರಿಂದ ನಗೇಂದ್ರನು ಸುಮ್ಮನೆ ಬರವಣಿಗೆಯನ್ನು ನೋಡುತ್ತಾ ಕುಳಿತನು. ಅನಂತನು ಪತ್ರವನ್ನು ಸಂಸ್ಕೃತದಲ್ಲಿ ಬರೆದು ಮುಗಿಸಿದನು. ಇವನು ಬರೆಯುತ್ತಿರುವಾಗಲೇ ನಗೇಂದ್ರನು ಕರೇಹಲಗೆಯನ್ನೂ ಬಳಪವನ್ನೂ ತಂದನು. ಪತ್ರವು ಮುಗಿದ ಕೂಡಲೇ "ಇದು ಎಂತಹ ಅಕ್ಷರ?'' ಎಂದು ಪ್ರಶ್ನೆ ಮಾಡಿದನು.

ಅನಂತ—ಸಂಸ್ಕೃತ.

ನಗೇಂದ್ರ—ನಾನೆಂದೂ ಇದನ್ನು ನೋಡಿರಲಿಲ್ಲ.

ನಗೇಂದ್ರನು ಹೀಗೆ ಹೇಳಿದನು. ಮತ್ತು ಅಲ್ಲಿಂದೆದ್ದು ಅನಂತನನ್ನು ಬಿಟ್ಟು ಹೋಗಬೇಕೆಂದು ಪ್ರಯತ್ನಿಸಿದನು. ಅನಂತನಾಥನು ಅವನನ್ನು ಹೋಗಗೊಡಲಿಲ್ಲ. ನಗೇಂದ್ರನು ಅತಿಸಾಹಸ ಮಾಡಿದನು. ಆದರೇನೂ ಪ್ರಯೋಜನವಾಗಲಿಲ್ಲ. ನಗೇಂದ್ರನು ಅಳಲು ಪ್ರಾರಂಭಿಸಿದನು. ಅನಂತನಾಥನು ಅವನನ್ನು ಕೈಬಿಟ್ಟನು. ಅವನ ಬಾಹುಗಳಿಂದ ಮುಕ್ತನಾಗಿ ಆ ಹುಡುಗನು ಸಂತಸದಿಂದ ಕುಣಿಯುತ್ತಾ ಕೂಗಾಡುತ್ತಾ ತನ್ನ ಮಾತೆಯ ಬಳಿಗೆ ಹೋದನು.

ತೃತೀಯ ಬಿಂದು

(ಸೃಷ್ಟನೇಯ ಪತ್ರ)

ಕೃಷ್ಣಮೂರ್ತಿಯು ಕಾರ್ಯಾಲಯದಿಂದ ಹಿಂದಿರುಗಿ ಬಂದನು. ಅವನು ಬಂದಾಗ ೮ ಘಂಟೆಯಾಗಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಬೇಗ ಬೇಗನೆ ಊಟಮಾಡಿ ಹಾಸುಗೆಯನ್ನು ಸಜ್ಜುಗೊಳಿಸಿ ಮಲಗಿದರು. ಒಂದೆರಡು ತಾಸುಗಳಾದ ಕೂಡಲೇ ಶಾಂತತೆಯು ತನ್ನರಾಜ್ಯಭಾರ ಕಾರ್ಯವನ್ನು ನೆರವೇರಿಸುತ್ತಿದ್ದುದು ರೋಹಿಣೀಕಾಂತನು ಆಗಲೇ ತನ್ನ ಅನುಯಾಯಿಗಳೊಡನೆ ತಾರಾಪಥವನ್ನು ಬಿಟ್ಟು ಹೋಗಿದ್ದನು. ಆ ಗಾಢನಿಶಿಯಲ್ಲಿ ಒಬ್ಬರಮುಖವು ಮತ್ತೊಬ್ಬರಿಗೆ ಕಾಣಿಸದು. ಬೀದಿ ಇರುವೆಡೆ ಸೂಚಿಸದು. ಸರ್ವತ್ರ ಅಂಧಕಾರಮಯ. ನಭೋಮಂಡಲವು ಮೇಘಗಳಿಂದ ಆಚ್ಛಾದಿತ. ಸ್ವಲ್ಪವಾದರೂ ಶಬ್ದ ಕೇಳಿ ಬರುತ್ತಿರಲಿಲ್ಲ. ಎಲ್ಲೆಲ್ಲಿಯೂ ನಿಶ್ಶಬ್ದತೆ. ಇಷ್ಟು ಹೊತ್ತಿನವರೆಗೂ ನಿಶ್ಶಬ್ದಮಯವಾಗಿ ಕರ್ತವ್ಯ ನಿಷ್ಠತೆಯಿಂದ ಕಣ್ಗೊಳಸುತ್ತಿದ್ದ ಭೂಮಿಯ ಸರ್ವಾವಯವಗಳಲ್ಲಿಯೂ ಶಬ್ದವೇ ಇಲ್ಲದೆ ನಿಶ್ಶಬ್ದತೆಯು ಶಬ್ದಸ್ಥಾನವನ್ನಾಕ್ರಮಿಸಿದ್ದಿತು. ಯಾರೂ ಈ ಕಾಲದಲ್ಲಿ ಎದ್ದಿದ್ದಂತೆ ಕಾಣಬರುತ್ತಿರಲಿಲ್ಲ. ಆದರೆ ಈಗ ಯಾರು ಎದ್ದಿದ್ದರೆಂಬುದನ್ನು ಪಾಠಕರಿಗೆ ಈಗಲೇ ಪರಿಚಯವುಂಟುಮಾಡಿಕೊಡುವೆವು.

ಈ ಗಾಢನಿಶಿಯಲ್ಲಿ ಕೃಷ್ಣಮೂರ್ತಿಯ ಮನೆಯಲ್ಲಿ ಮೂರು ವ್ಯಕ್ತಿಗಳು ಕುಳಿತಿದ್ದುವು. ಅವರೇ ಕೃಷ್ಣಮೂರ್ತಿ, ರಾಧಾಬಾಯಿ, ಅನಂತನಾಥರು. ಅನಂತನಾಥನು "ಕಾಗದದ ಅಭಿಪ್ರಾಯವು ತಿಳಿಯಿತೇ ?" ಎಂದನು.

ಕೃಷ್ಣಮೂರ್ತಿ—ನನಗೆ ಹೇಗೆ ತಿಳಿಯಬೇಕು? ಅದು ಸಂಸ್ಕೃತದಲ್ಲಿದೆ ನನಗೆ ಗೀರ್ವಾಣಭಾಷೆಯ ಗಂಧವೇ ಇಲ್ಲ. ಅನಂತನಾಥ—ಇಲ್ಲಿಗೆ ಕೆಲವು ಜನ ದಗಾಖೋರರು ಗುಂಪು ಕಟ್ಟಿಕೊಂಡು ಬರುತ್ತಾರೆ ನಮ್ಮ ದೇಶದಲ್ಲಿ ಅವರು ಹಾವಳಿ ಮಾಡಬಹುದು. ಅವರು ಶ್ರೀನಗರಕ್ಕೆ ಬರುತ್ತಾರೆಂದು ಕೇಳಿದ್ದೇನೆ. ಆದ್ದರಿಂದ ನೀನು ಜಾಗ್ರತೆಯಾಗಿ ಬಂದು ಕೆಲವರನ್ನು ಸಹಾಯಕ್ಕೆ ಕರೆದುಕೊಂಡು ಹೋಗಿ ಅವರನ್ನು ನಿರ್ಮೂಲಮಾಡಬೇಕು.

ಅತಿ ತೀವ್ರವಾಗಿ ಹೊರಟು ಬಾ. ಎಂದು ಬರೆದಿದ್ದಾರೆ. ನೋಡಿದರೋ ಈ ಅಪ್ಪಣೆ ಹೇಗಿದೆ?

ಕೃಷ್ಣಮೂರ್ತಿ—ಕಳ್ಳರು ಬರುವುದೇ ನಿಜ.

ರಾಧಾಬಾಯಿ—ಹಾಗಾದರೇನು ಮಾಡಬೇಕು?

ಅನಂತನಾಥ—ಅದಕ್ಕೇನಾದರೂ ಒಂದು ವ್ಯವಸ್ಥೆಯನ್ನು ಮಾಡಲೇ ಬೇಕು.

ಕೃಷ್ಣಮೂರ್ತಿ—ಹಿರಿಯರು ತಾವಿರುವಾಗಲೇ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಅನಂತನಾಥ—ಧನವೇ ಮೊದಲಾದುದೆಲ್ಲವನ್ನೂ ನಾನು ತೆಗೆದು ಕೊಂಡು ಹೋಗುತ್ತೇನೆ.

ರಾಧಾಬಾಯಿ—ಮತ್ತೊಮ್ಮೆ ಬರುವಿರಾ?

ಅನಂತನಾಥ—ಕಳ್ಳರನ್ನಡಗಿಸಲು ಈಗ ಹಾಗೆಯೇ ಬರುವೆನು. ಅನಂತರ ಧನವನ್ನೆಲ್ಲಾ ತರುವೆನು.

ಕೃಷ್ಣಮೂರ್ತಿ—ಹಿತೈಷಿಗಳು ಹೇಳಿದಂತೆ ನಡೆಯುವುದೇ ಒಳ್ಳೆಯದು.

ರಾಧಾಬಾಯಿ—ತಮ್ಮ ಕ್ಷೇಮಸಮಾಚಾರವು ನಮಗೆ ತಿಳಿಯುವುದು ಹೇಗೆ?

ಅನಂತನಾಥ—ನಾನು ಪತ್ರ ಬರೆಯುವೆನು,

ಕೃಷ್ಣಮೂರ್ತಿ—ತಾವು ಯಾವಾಗ ಹೊರಡುವಿರಿ?

ರಾಧಾಬಾಯಿ—ನಾಳೆ ನಸುಕಿನಲ್ಲಿ ಹೊರಟು ಹೋಗುತ್ತಾರೆ. ಆ ಹೊತ್ತಿಗೆ ಎಲ್ಲವನ್ನೂ ಸರಿಮಾಡಿರಬೇಕು.

ಅನಂತನಾಥ—ನಿಜ

ಕೃಷ್ಣಮೂರ್ತಿ—ಹಣವನ್ನೆಲ್ಲಾ ಕೊಟ್ಟು ಅದಕ್ಕೆ ಬದಲು ನೋಟುಗಳನ್ನು ತರುತ್ತೇನೆ

ರಾಧಾಬಾಯಿ—ನಾನು ಆ ಹೊತ್ತಿಗೆ ಎಲ್ಲಾ ಕಟ್ಟಿ ಸರಿಮಾಡುತ್ತೇನೆ.

ಅನಂತನಾಥ—ಪ್ರಯಾಣವು ನಿಶ್ಚಯ. ನಾಳೆಹೊರಡುವುದು ಖಂಡಿತ

ಕೃಷ್ಣಮೂರ್ತಿ—ಇನ್ನು ಮಲಗುವ, ನಡೆಯಿರಿ.

ಅನಂತನಾಥ—ಆಗಬಹುದು.

ರಾಧಾಬಾಯಿಯು ಎದ್ದು ಹೋಗಿ ನಗೇಂದ್ರನ ಸಮೀಪದಲ್ಲಿ ಶಯನಿಸಿದಳು. ಕೃಷ್ಣಮೂರ್ತಿಯು ಸಮೀಪದಲ್ಲಿದ್ದ ತನ ಶಯ್ಯಾಗೃಹಕ್ಕೆ ಹೋದನು. ಅನಂತನಾಥನೊಂದು ಮೂಲೆಯಲ್ಲಿ ಕುಳಿತು ಚಿಂತಿಸಲಾರಂಭಿಸಿದನು. "ನಾನು ಮಾಡಿದ ಪ್ರತಿಜ್ಞೆಯು ಇವನ ಆಸ್ತಿಯನ್ನೆಲ್ಲಾ ತೆಗೆದುಕೊಂಡು ಹೋಗಬೇಕೆಂದು; ಆ ಪ್ರತಿಜ್ಞೆಯ ಪರಿಣಾಮವು ಸರಿಯಾಯಿತು. ಅದು ಹಾಗಿರಲಿ, ಈ ಕೃಷ್ಣಮೂರ್ತಿಯ ಬುದ್ಧಿ ಮುಸಲಾಗ್ರಬುದ್ಧಿ; ಇಷ್ಟು ಹೊತ್ತು ಮಾತಾಡಿದೆವು. ನಡುವೆ ನಿನ್ನ ವಿಳಾಸವೇನೆಂದು ಕೇಳಲಿಲ್ಲ. ಅದು ನನಗೆ ಒಳ್ಳೆಯದೇ ಆಯಿತು. ನಾಳೆ ಇದನ್ನು ತೆಗೆದುಕೊಂಡು ಹೊರಟು ಬಿಡುವೆನು ಮತ್ತೆ ಇವರು ನನ್ನ ಮುಖವನ್ನು ನೋಡಲಾರರು. ಕುದುರೆಯವನು ಬಂದು ಕೇಳಲಿ. ಆಗುವುದಾಗುತ್ತದೆ."

ಅಷ್ಟರಲ್ಲಿಯೇ ಏನೊ ಶಬ್ದವಾಗಲು ಗೊಣಗುಟ್ಟುವುದು ನಿಂತು ಹೊಯಿತು. ಅನಂತನಾಥನು ಶಬ್ದವೇಕಾಯಿತೆಂದು ನೋಡಲು ಹೋದನು. ಒಳಗೆ ಬಂದು ಮಾರ್ಜಾಲವು ಹಾಲನ್ನುರುಳಿಸಿತ್ತು. ಹಾಲನ್ನೆತ್ತಿಟ್ಟು ಹೊರಗೆ ಬಂದನು. ಆಗ ಅವನಿಗೆ ನಿದ್ರೆಯು ಬರಹತ್ತಿತು. ಹಾಸಿಗೆಯಮೇಲೆ ಕುಳಿತನು ನಿದ್ರಾದೇವಿಯು ಅವನನ್ನಾಲಿಂಗಿಸುವುದಕ್ಕೆ ಆರಂಭಮಾಡಿದಳು; ಕುಳಿತಿದ್ದವನು ಮಲಗಿದನು. ಸ್ವಲ್ಪ ಹೊತ್ತಿನಲ್ಲಿಯೇ ನಿದ್ರಾಲತಾಂಗಿಯು ಇವನನ್ನು ಸಂಪೂರ್ಣವಾಗಿ ಆಲಿಂಗಿಸಿ ಸುಖವನ್ನುಂಟು ಮಾಡಿದಳು. ಆ ಸೌಖ್ಯವನ್ನನುಭವಿಸುತ್ತಾ "ನಾನು ನಿದ್ರಾಲತಾಂಗಿಯ ಆಲಿಂಗನದಿಂದ ಸೌಖ್ಯವನ್ನನುಭವಿಸಿರುವುದು ನಿಜ" ವೆಂದ ಪ್ರಪಂಚಕ್ಕೆಲ್ಲಾ ತಿಳಿಸುತ್ತಾನೆಯೋ ಎಂಬಂತೆ ಗೊರಕೆ ಹೊಡೆಯಲಾರಂಭಿಸಿದನು.

ಚತುರ್ಥ ಬಿಂದು

(ಪ್ರತಿಜ್ಞೆಯ ಪರಿಣಾಮ)

—(❋)—

ಎಂದೆಂದಿಗೂ ಹೊರಬೀಳದ ಪದಾರ್ಥಗಳು ಇಂದು ಬಯಲಿಗೆ ಬಂದುವು. ಯಾರ ಮನೆಯಲ್ಲಿ? ಕೃಷ್ಣಮೂರ್ತಿಯ ಮನೆಯಲ್ಲಿ. ಆತನು

ತಾವು ಹೇಳಿದ್ದಂತೆ ನಗದೀ ಪೆಟ್ಟಿಗೆಯಲ್ಲಿ ಹಣಕ್ಕೆಲ್ಲಾ ನೋಟುಗಳನ್ನು ತಂದಿದ್ದನು. ಅಮೂಲ್ಯವಸ್ತುಗಳೆಲ್ಲಾ ಭದ್ರವಾಗಿ ಕಟ್ಟಲ್ಪಟ್ಟವು. ಗಾಡಿಯೊಂದು ಕೃಷ್ಣಮೂರ್ತಿಯ ಮನೆಗೆ ಬಂದು ನಿಂತಿತು. ಸೇವಕರು ಸಾಮಾನುಗಳನ್ನು ತಂದು ಹಾಕಿದರು, ಕೃಷ್ಣಮೂರ್ತಿಯೂ ನಮ್ಮ ಕಥಾನಾಯಕನಾದ ಅನಂತನಾಥನೂ ಬಂಡಿಯನ್ನು ಹತ್ತಿದರು. ಆ ಬಂಡಿಯು ಶ್ರೀನಗರದ ರಾಜಬೀದಿಯಿಂದ ಹೊರಟು ಅನೇಕ ಮಾರ್ಗಗಳಿಗೆ ತಿರುಗಿ ಕಣ್ಣಿಗೆ ಕಾಣಿಸದಂತಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಅದು ಮದನಪುರದ (ಸ್ಟೇಷನ್) ಧೂಮಶಕಟಾಲಯದ ಮುಂದೆ ಬಂದು ನಿಂತಿತು. ಈರ್ವರೂ ಇಳಿದರು. ಅಲ್ಲಿ ಬಹಳ ಜನಸ್ತೋಮ. ಶುಭ್ರವಾದ ಉಡುಪುಗಳನ್ನುಟ್ಟು, ಮೇಲೆ ಪರಿಮಳದ್ರಾವಕವನ್ನು ಚಿಮಿಕಿಸಿ ಕೊಂಡಿದ್ದ ಯುವಾ ಪುರುಷರು ಹಲವರು; ವಿಚಿತ್ರವಾದ ಪಾಯಿಜಾಮೆಗಳನ್ನೂ ಕಾಲ್ಚೀಲಗಳನ್ನೂ ಮೋಜುಗಳನ್ನೂ ಅಂಗಿಗಳನ್ನೂ ಧರಿಸಿದ್ದವರು ಕೆಲವರು; ತಲೆಯಲ್ಲಿ ಮುಂದೆ ಶಿಖೆಯನ್ನು ಬಿಟ್ಟು ಕೇಶರಂಜನಿ (Hair oil) ಎಣ್ಣೆಯಿಂದ ತಲೆ ಬಾಚಿಕೊಂಡು ತಿರುಗಾಡುತ್ತಿದ್ದವರು ಕೆಲವರು; ಬಾಯಲ್ಲಿ ಹುಕ್ಕೆಯನ್ನಿಟ್ಟುಕೊಂಡಿದ್ದವರು ಕೆಲವರು; ಇಂತಹರ ನಡುವೆ ಅಲ್ಲಲ್ಲಿ ಒಬ್ಬೊಬ್ಬ ಸಭ್ಯ ಗೃಹಸ್ಥನೂ ಕೆಲ ಜನ ವ್ಯಾಪಾರಿಗಳೂ ಕಾಣುತ್ತಿದ್ದರು. ಮೂರು ಸಲ ಘಂಟಾನಾದವಾಯಿತು. ಧೂಮಶಕಟವು ಹೊರಟು ಬಿಟ್ಟಿತು. ಅನಂತನಾಥನು ಕಿಟಕಿಯಲ್ಲಿ ತಲೆಯನ್ನಿಟ್ಟು ನೋಡುತ್ತಿದ್ದನು. ಯಾರೋ ಕೆಳಗಣಿಂದ "ಏನು ಸ್ವಾಮೀ, ಹೊರಟು ಬರುತ್ತೀರಾ?" ಎಂದರು. ಅನಂತನು "ಮತ್ತೊಮ್ಮೆ ಬರುವೆನು" ಎಂದುತ್ತರವಿತ್ತನು.

"ತಾವು ಯಾವಾಗ ಹಿಂತಿರುಗುವಿರಿ?"

"ಮನೆಯಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸಿರುತ್ತೇನೆ."

"ನಾನು ಹೊರಡಲೋ?"

"ಒಹೋ! ಅಗತ್ಯವಾಗಿ ಆಗಬಹುದು."

ಇಷ್ಟರಲ್ಲಿ ರೈಲುಗಾಡಿಯು ದೂರಕ್ಕೆ ಹೋಯಿತು. ಅವರ ಸಂಭಾಷಣೆಯು ನಮಗೆ ಕೇಳಿಸಲಿಲ್ಲ. ವಾಚಕರಿಗೆ ತಿಳಿಯ ಬೇಕೆಂದು ಕುತೂಹಲವಿರಬಹುದು. ಆದರೆ ಯತ್ನವಿಲ್ಲ.

ಅನಂತನು ಕೂತಿದ್ದ ಕೊಠಡಿಯಲ್ಲಿ ಮೊದಲು ಮೊದಲು ಯಾರೂ ಇರಲಿಲ್ಲ. ಬರುತ್ತಾ ಮದವೇರಿದ ಮಾತುಗಳಿಂದಲೂ ಹುಕ್ಕಾವಿನ ಹೊಗೆಯಿಂದಲೂ ತುಂಬಿ ಜನ ಭರಿತವಾಯಿತು. ಮಣಿ ಪ್ರದರಲ್ಲಿ ಒಬ್ಬ ಹದಿನಾರು ವರ್ಷದ ಬಾಲನು ಅನಂತನಾಥನು ಕುಳಿತಿದ್ದ ಕೊಠಡಿಯಲ್ಲಿ ಕೂಡುವುದಕ್ಕೆ ಬಂದನು. ಅವನು ನಮ್ಮ ಕಥಾನಾಯಕನನ್ನು ನೋಡಿ "ಅಣ್ಣಾ" ಎಂದನು. ಅನಂತನಾಥನವನನ್ನು ನೋಡಿ "ಭ್ರಾತೃ! ಸುರೇಂದ್ರ! ಇಷ್ಟು ದಿನವೂ ಮನೆಯನ್ನು ಬಿಟ್ಟು ಎಲ್ಲಿಗೆ ಹೋಗಿದ್ದೆ?" ಎಂದು ಕೇಳಿದನು

ಸುರೇಂದ್ರ—ಅಣ್ಣಾ ಕೇಳು. ನೀನೆಂದು ನನ್ನನ್ನು ಪ್ರಹರಿಸಿದೆಯೋ ಅಂದೇ ಮನೆಯನ್ನು ಬಿಟ್ಟು ಹೊರಟೆನು. ನನ್ನ ಕೈಯಲ್ಲಿ ಒಂದು ಕಾಸೂ ಇರಲಿಲ್ಲ; ಏನು ಮಾಡುವುದು, ನಡೆದುಕೊಂಡು ಹೋದೆನು. ಎಲ್ಲಿಗೆಹೋದೆನೆನ್ನುವೆಯೋ? ಕಾಶಿಗೆ. ಅಲ್ಲಿ ಒಂದು ಮಠದಲ್ಲಿ ಸೇರಿದೆನು. ಅನ್ನಾಹಾರಗಳಿಗೆ ಆಶ್ರಯವು ದೊರಕಿದಂತಾಯ್ತು. ಅಲ್ಲಿನ ಅಧಿಪತಿಗಳಲ್ಲಿ ಬಿನ್ನವಿಸಿಕೊಂಡೆನು. ಸ್ವಲ್ಪ ಹಣದಾಶ್ರಯವಾಯಿತು. ನಾನು ಸಂಸ್ಕೃತವನ್ನುಅಭ್ಯಾಸ ಮಾಡಿದೆನು. ಈಗ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆನು. ಒಂದು ದಿನ ಮನೆಯ ಜ್ಞಾಪಕಕ್ಕೆ ಬರಲು ಅತ್ತಿಗೆಯನ್ನೂನಿನ್ನನ್ನೂ ಅತ್ತೆಯನ್ನೂ ನೆನೆದು ಮಾತಾ ಪಿತೃಗಳ ಬಳಿಗೆ ಬರಲಿಷ್ಟ ಪಟ್ಟು ಬಂದೆನು. ನಿನ್ನನ್ನು ನೋಡಿದೆನು ನಿನ್ನ ಪ್ರಯಾಣವೆಲ್ಲಿಗೆ? ಅಣ್ಣಾ.

ಅನಂತನಾಥನು ಇದನೆಲ್ಲಾ ಕೇಳುತ್ತಲಿದ್ದಾಗ ಕಣ್ಣಿನಲ್ಲಿ ಕಂಬನಿಯುಕ್ಕಿ ಬಂತು. ಭ್ರಾತೃವೇ! "ಈಗಲೇ ಮನೆಯು ಜ್ಞಾಪಕಕ್ಕೆ ಬಂದಿತೋ" ಎಂದನು. "ಅಣ್ಣಾ ಜ್ಞಾಪಕಕ್ಕೆ ಬರದಿರುವುದುಂಟೆ?" ಎಂದು ಪ್ರತ್ಯುತ್ತರ ಬಂದಿತು.

ತಂದೆಯನ್ನು ನೋಡಬೇಕೆಂಬ ಕುತೂಹಲವು ಇದೆಯೋ?

ಇರುವುದು.

ನಿನ್ನಾಸೆಯು ನೆರವೇರುವಂತಿಲ್ಲ.

ಅದೇಕೆ?

ಹೀನ ಭಾಗ್ಯನಾದ ನಿನ್ನಣ್ಣನ ತಂದೆಯು ಮೃತನಾಗಿ ಮೂರು ತಿಂಗಳಾಯಿತು.

ಇದನ್ನು ಹೇಳುತ್ತಿರುವಾಗ ಅವನಿಗೆ ಗಂಟಲು ಕಟ್ಟಿತು. ಮುಂದೆ ಮಾತನಾಡಲಾಗಲಿಲ್ಲ. ಕೈ ವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡನು. ಪ್ರಿಯ, ಪಾಠಕರೇ! ಪಿತನನ್ನುನೋಡಿ ಆಲಿಂಗನಮಾಡಿಕೊಳ್ಳಬೇಕೆಂದು ಬರುತ್ತಿದ್ದ ಸುರೇಂದ್ರನು ಈ ದುಃಖವಾರ್ತೆಯನ್ನುಕೇಳಿದಾಗ ಎಷ್ಟು ವ್ಯಥೆ ಪಟ್ಟಿರಬಹುದು, ನೀವೇ ಯೋಚಿಸಿ.

ಸುರೇಂದ್ರನು ಕಿಟಕಿಯಲ್ಲಿ ತಲೆ ಬಗ್ಗಿಸಿ ನೋಡಿದನು. ಆಗಲೇ ಗಾಢನಿಶಿ; ಪೋರ್ಟರೊಬ್ಬನನ್ನು ಕೇಳಿದನು. ಗಂಟೆಯೆಷ್ಟೆಂದು.

"ಎರಡೂವರೆ"

"ಶಂಕರೀದುರ್ಗಕ್ಕೆ ಎಷ್ಟು ಹೊತ್ತಿಗೆ ಹೋಗುವುದು?"

"ಮೂರೂವರೆಗೆ"

ಸ್ವಲ್ಪಹೊತ್ತಿನಲ್ಲಿಯೇ ಶಂಕರೀದುರ್ಗವು ಕಣ್ಣಿಗೆ ಕಾಣಬಂದಿತು. ನಿದ್ರೆಯಿಂದ ತೂಕಡಿಸುತ್ತಿದ್ದ ಪೋರ್ಟರೊಬ್ಬನು ಶಂಕರಿದುರ್ಗವೆಂದು ಮೆಲ್ಲನೆ ಕೂಗಿದನು. ಅನಂತನಾಥನೂ ಅವನ ಭ್ರಾತೃವೂ ಇಳಿದರು. ಎಲ್ಲೆಲ್ಲಿಯೂ ನಿಶ್ಶಬ್ದ, ಕೂಲಿಯವರ ಓಡಾಟವೇ ಇಲ್ಲ. ಏನು ತಾನೆ ಮಾಡಬೇಕು? ಭ್ರಾತೃವೂ ಹೊರಬೇಕಾದುದರಿಂದ ಕಾಂತನಾಥನು ದುಃಖಿಸಿದನು. ಇಬ್ಬರೂ ಹೊರಟರು; ಭವಾನಂದನ ಮನೆಗೆ ಬಂದರು. ವೈಧವ್ಯದುಃಖವನ್ನನುಭವಿಸುತ್ತಿದ್ದ ಮಾತೆಯು ತನ್ನ ಪುತ್ರರು ಬಂದುದರಿಂದ ಆ ದುಃಖವನ್ನುಮರೆತಳು. ಪತಿಯ ತಮ್ಮನು ಇಷ್ಟುದಿನ ಮನೆಬಿಟ್ಟು ಹೋಗಿ ಸುರಕ್ಷಿತವಾಗಬಂದುದರಿಂದ ಅವನ ಅತ್ತಿಗೆಗೂ ಸಂತಸವಾಯಿತು. ಆದಿನ ವಿಷವಾದರೂ ಅಮೃತದಂತಿರುವಂತಿತ್ತು. ಎಲ್ಲರೂ ಸರಸಸಲ್ಲಾಪಗಳನ್ನಾಡುತ್ತಾ ಸುಖವಾಗಿ ಭೋಜನಮಾಡಿದರು ಎಲ್ಲರಿಗೂ ಇಂದು ಆನಂದ. ಅನಂತನಾಥನಿಗೆ ಅತ್ಯಾನಂದ. ಏಕೆಂದರೆ, ತನ್ನ ಪ್ರತಿಜ್ಞೆಯು ಪರಿಣಾಮವೂ ಒಳ್ಳೆತಾಗಿಯೇ ಪರಿಣಾಮಗಂಡಿತು; ಅಗಲಿದ್ದ ಸೋದರನೂ ಬಂದನು.

ಪಂಚಮ ಬಿಂದು

(ಹಾ ! ಏನಾಯಿತು ?)

ಪಾಠಕರು ಅಶ್ವವರ್ತಕನನ್ನು ಈಗಾಗಲೇ ಮರೆತುಬಿಟ್ಟಿರಲಾರರು. ಮರೆತು ಬಿಟ್ಟದ್ದ ಪಕ್ಷದಲ್ಲಿ ಜ್ಞಾಪಿಸಿಕೊಳ್ಳಿ. ಅನಂತನಾಥನು ಹೇಳಿದ ಮೇರೆಗೆ ಮೂರು ದಿನಗಳಾದ ಮೇಲೆ ಅವನು ಕೃಷ್ಣಮೂರ್ತಿಯ ಮನೆಗೆ ಬಂದು ಹಣವನ್ನು ಕೇಳಿದನು. ಮನೆಯಲ್ಲಿದ್ದ ಅಲ್ಪಸ್ವಲ್ಪ ಹಣವೂ ವೆಚ್ಚವಾಯಿತು ಎಲ್ಲಿಯೋ ತಂದು ಹಣವನ್ನು ಕೊಟ್ಟದುದಾಯಿತು.

ಯಾರು ಯಾವ ಕೆಲಸವನ್ನಾದರೂ ಮಾಡದಿರಬಹುದು. ಆದರೆ ಕಾಲನು ತನ್ನ ಕಾರ್ಯವನ್ನು ಯಾವಾಗಲೂ ನೆರವೇರಿಸುವನು ಹೇ ! ಕಾಲಚಕ್ರ, ನೀನೇಧನ್ಯ. ನೀನೇಸುಖಿ. ಆವಾಗಲೂ ವಿಚಿತ್ರತರವಾದ ಕಾರ್ಯಗಳನ್ನು ನಡೆಸುತ್ತಾ ಸದಾನಂದಮೂರ್ತಿಯಾಗಿ ಸದಾ ಆನಂದಿಸುತ್ತಿರುವೆ ಒಂದು ಮಾಸವಾಯಿತು. ಅನಂತನಾಥನಿಂದ ಕೃಷ್ಣಮೂರ್ತಿಗೆ ಕಾಗದವಿಲ್ಲ. ಅವನು ಹೇಳಿದ್ದಂತೆ ಪಗಾಖೋರರೂ ಬರಲಿಲ್ಲ. ಏನು ವಿಚಿತ್ರವಿರಬಹುದು ? ಕೃಷ್ಣಮೂರ್ತಿಗೆ ಅನಂತನ ವಿಳಾಸವನ್ನು ಕೇಳಲಿಲ್ಲ ವೆಂಬಂಶವು ತಿಳಿಯಿತು. ಆದರೆ, ತನ್ನಪತ್ನಿಯ ಸೋದರನೆಂದು ಭ್ರಮಿಸಿ ಸುಮ್ಮನಾದನು. ಪತ್ನಿಯೂ ಸಹ ತನ್ನ ಪತಿಯ ಸೋದರನು ಬಂದಿದ್ದರೂ ಬಂದಿರುವನು, ಎಂದು ಭ್ರಾಂತಿಗೊಂಡಳು. ನಗೇಂದ್ರನಿಗೆ “ ಚಿಕ್ಕಪ್ಪ ಚಿಕ್ಕಪ್ಪ ”ನೆಂದು ಸಂಬೋಧಿಸಲು ಯಾರೂ ಇಲ್ಲದಂತಾಯಿತು. ಅವನಿಗೆ ವಿನೋದವಾಗಿ ಕಾಲ ಕಳೆಯುವುದು ಈಗ ದುಸ್ತರ, ಜ್ಯೇಷ್ಠಪುತ್ರನು ಇದಾವ ತಂಟೆಗೂ ಹೋಗಲಿಲ್ಲ. ಅವನ ಶಾಲೆಯಾಯಿತು ; ಅವನಾಯಿತು. ಅವನಿಗೆ ಈ ವಿಚಾರವೂ ತಿಳಿಯದು.

ಬರುತ್ತಿದ್ದ ವರಮಾನವು ಖರ್ಚಿಗೇ ಆಗಿ ಹೋಗುತ್ತಿತ್ತು. ಗಳಿಸಿದ್ದ ಧನವಾದರೂ ಇದ್ದರೆ ಅದನ್ನು ವ್ಯಯ ಮಾಡಬಹುದಾಗಿತ್ತು. ಆದರೆ ಆ ಹಣವುಇಲ್ಲ. ಎಲ್ಲವನ್ನೂ ತಿಳಿಯದ ಅಪರಿಚಿತಸ್ಥನಿಗೆ ಧಾರೆಯೆರೆದು ಕೊಟ್ಟಂತಾಯಿತು. ಈಗಲೇನು ಮಾಡಬೇಕು. ?

ಮೊಟ್ಟಮೊದಲು ಐಶ್ವರ್ಯವಂತನಾದ ಕೃಪಣ ಕೃಷ್ಣಮೂರ್ತಿಯು ಈಗ ದರಿದ್ರಾವಸ್ಥೆಯಲ್ಲಿ ಅಡಿಯಿಟ್ಟನು. ಸೇವಕರೆಲ್ಲರೂ ದೂರವಾದರು. ಜಮೀನುಗಳೆಲ್ಲಾ ಸಾಲಕ್ಕಾಗಿ ಕೊಡಲ್ಪಟ್ಟವು. ಮೂಮಲೆಯ ಸಹಸ್ರವು ಸಾಲದಾಯಿತು. ಶುಭ್ರವಾದ ಜರತಾರಿಯ ಉಡುಪನ್ನು ಧರಿಸುತ್ತಿದ್ದ ಪುತ್ರರು ಮಲಿನವಾದ ಬಟ್ಟೆಗಳನ್ನುಡಬೇಕಾಯಿತು. ಭಾಗ್ಯಲಕ್ಷ್ಮಿಯು ಕೃಷ್ಣಮೂರ್ತಿಯನ್ನು ಕೈಬಿಟ್ಟಳು. ದರಿದ್ರದೇವತೆಯು ಒಲಿದಳು

ಒಂದು ದಿನ ಮಧ್ಯಾಹ್ನ ಮೂರುಗಂಟೆಯ ಸಮಯ. ತಪನನ ಕಿರಣಗಳು ತೀಕ್ಷ್ಣವಾಗಿರಲಿಲ್ಲ. ಅನೇಕ ಪಕ್ಷಿಗಳು ಬಿಸಿಲಿನಲ್ಲಿಯೇ ಕುಳಿತು ಶಬ್ದವನ್ನು ಮಾಡುತ್ತಿದ್ದವು ಕೆಲ ಯುವತಿಯರು ನೀರನ್ನು ತರಲು ತಲೆಯಮೇಲೆ ಕೊಡಗಳನ್ನಿಟ್ಟುಕೊಂಡು ಕೊಳಕ್ಕೆ ಹೋಗುತ್ತಿದ್ದರು. ತಾರಾಪಥದಲ್ಲಿ ದಿನಮಣಿಯು ತೇಜೋವಂತನಾಗಿ ಪ್ರಕಾಶಿಸುತ್ತಿದ್ದನು. ಒಂದು ಕೊಠಡಿಯಲ್ಲಿ ಒಬ್ಬ ಯುವತಿಯೂ ಒಬ್ಬ ಯುವಕನೂ ಮಾತನಾಡುತ್ತಿದ್ದರು.

ಯುವತಿ—ಅವರಿಂದ ಕಾಗದವೂ ಇಲ್ಲ. ಅವರೂ ಬರಲಿಲ್ಲ.

ಯುವಕ—ಇಲ್ಲ. ರಾಧಾ! ನಾನು ಕಟ್ಟೆ, ಅವನು ಕಾಗದವನ್ನು ಹಾಕುವೆನೆಂದು ಹೇಳಿದನು.

ರಾಧಾಬಾಯಿ—ಆತನುಬರಲಾರದೆ ಇರನು; ಬರಬಹುದು.

ಕೃಷ್ಣಮೂರ್ತಿ—ನನಗೂ ಹಾಗೇ ತೋರುತ್ತದೆ.

ರಾಧಾಬಾಯಿ—ರೈಲಿಗೆ ಹೋಗಿದ್ದಿರಲ್ಲಾ; ಆಗ ಆತನು ಏನನ್ನು ಹೇಳಿದನು?

ಕೃಷ್ಣಮೂರ್ತಿ—ಮನೆಯಲ್ಲಿ ಎಲ್ಲಾ ಹೇಳಿದ್ದೇನೆ, ಎಂದನು.

ರಾಧಾಬಾಯಿ—ಆತನಾರು? ನಿಮ್ಮ ಸೋದರನಲ್ಲವೇ?

ಕೃಷ್ಣಮೂರ್ತಿ—ನಿನ್ನ ಸೋದರನಲ್ಲವೇ?

„ ಅಲ್ಲ ''

„ ಹಾ! ಏನಾಯಿತು?. ''

ವಾಚಕರೇ! ಈಗ ದಂಪತಿಗಳಿಬ್ಬರ ಮುಖವನ್ನೊಮ್ಮೆ ನೋಡಿರಿ!

ಸಂಪೂರ್ಣಂ.

ಸೊಗಸಾದ ಕೆಲವು ಕನ್ನಡಗ್ರಂಥಗಳು.

	ಆ-ಪೈ
ವಿರಕ್ತಳಾದ ಸೌದಮನಿ	೬-೬
ಹೇಮಲತಾ	೧೨-೦
ಸಾವಿತ್ರಿ	೧೨-೦
ವಿಶಾಲಾಕ್ಷಿ	೧೨-೦
ಕಮಲಕುಮಾರಿ	೧೨-೦
ವಿಲಾಸಿನಿ	೧೦-೦
ಮಧುಸೂದನ	೪-೦
ಜಯಚಂದ್ರಿಕೆ	೪-೦
ನೀತಿಕುಸುಮಾವತಿ	೩-೦
ಚಿತ್ರಚರಿತ್ರೆ	೩-೦
ಸುವರ್ಣಸಂಪುಟ	೩-೦
ಶಂಕರಕಥಾಸಾರ	೮-೦
ಮೃತ್ಯುಪರೀಕ್ಷೆ	೨-೦
ಬೃಂದಾವನ	೨-೦
✓ಶ್ರೀಕಂಠಶಾಸ್ತ್ರಿಗಳ ಚರಿತ್ರೆ	೮-೦
✓ಗರಳಪುರಿಶಾಸ್ತ್ರಿಗಳ ಚರಿತ್ರೆ	೮-೦
ಸುಲೋಚನಾ	೩-೦
ಚಂಚಲೆ	೩-೦
ಸಾಹಸಕೇಸರಿ	೩-೦
ಅರೇಬಿಯನ್‌ನೈಟ್ಸ್	೮-೦
ಅದ್ಭುತರಾಮಾಯಣ	೮-೦
ಕ್ಷಾತ್ರತೇಜ	೬-೦
ನನ್ನಸಂಸಾರ	೫-೦
ವಿನೋದಚಂದ್ರ	೨-೦
ಏನೋ ಆಗಿಹೋಯಿತು	೧-೦

	ಆ-ಪೈ
ವಿಶ್ವನಾಥ	೧-೦
ಹರಿಣಾಕ್ಷಿ	೧-೦
ನಾರಾಯಣ	೧-೦
ಧರ್ಮಸುಧಾ	೧-೦
ಯಕ್ಷಿಣಿಯಮೋಸ	೧-೦
ದೈವಾನುಗ್ರಹ	೧-೬
ಅಂಬಾಲಿಕೆ	೧-೬
ಬಿಲ್ಲುಗಾರನಾದಮಲ್ಲ	೧-೬
ಕುಮಾರಭೀಮಸಿಂಹ	೧-೦
ಮಾಲಿನೀ	೨-೦
ಪ್ರೇಮಪಿಪಾಸೆ	೨-೦
ಸದಾಹಾರವಿವೇಚನೆ	೨-೦
ಕರಾವಲಂಬಸ್ತವ	೧-೦
ನೀತಿಬೋಧಿನಿ	೨-೦
ವಿನಾಯಕವಿಜಯ	೬-೦
ಸೊಬಗಿನಬಳ್ಳಿ	೨-೦
ಸುಮನೋರಮಾ	೨-೦
ವಿಲಕ್ಷಣದೈವಘಟನೆ	೪-೦
ದ್ವೈತೋಪಾಸಕಮತ	೧-೦
ವಿದ್ಯಾಭಿವೃದ್ಧಿ	೪-೦
ಕೈಗನ್ನಡಿ	೪-೦
ಚಂದ್ರಿಕಾವಿಜಯ	೩-೦
ಚೂಡಾದರ್ಶನ	೨-೦
ಹನುಮದ್ವಿಜಯ	೬-೦
ಅಧ್ಯಾತ್ಮರಾಮಾಯಣ ಬಾಲಕಾಂಡ	೮-೦

೨೫ ರೂಪಾಯಿಗಳ ಮೇಲ್ಪಟ್ಟ ಆರ್ಡರಿಗೆ ಉದಾರವಾದ ಕಮಿಷನ್

ನಮ್ಮ ವಿಳಾಸ:-ಎಡಿಟರ್ "ಕಾದಂಬರೀಸಂಗ್ರಹ," ಚಾಮರಾಜನಗರ.